# ಬೂದು ಕಾಜಾಣ






‘ಪಕ್ಷಿಲೋಕದ ರೌಡಿ’ ಎನ್ನುವ ಅನ್ವರ್ಥಕ ಹೆಸರೂ ಈ ಹಕ್ಕಿಗಳಿಗಿದೆ.

■ ಚಿತ್ರ– ಲೇಖನ: **ಪುಟ್ಟರಾಜು ಕೈಗಾ**

ಉತ್ತರ ಕನ್ನಡಕ್ಕೆ ಹಿಮಾಲಯದಿಂದ ಮೊದಲ ಚಳಿಗಾಲದ ವಲಸೆಗಾರನ ಆಗಮನ. ಬೂದು ಕಾಜಾಣ – **Ashy Drongo** – (ವೈಜ್ಞಾನಿಕ ಹೆಸರು **Dicrurus leucophaeus**) ನಮ್ಮ ಕಾರವಾರಕ್ಕೆ ವಲಸೆ ಬಂದು (ನೀವು ಈ ಲೇಖನ ಓದುವ ಹೊತ್ತಿಗೆ) ಒಂದು ತಿಂಗಳು ಕಳೆದಿದೆ. ಮೈನಾ ಗಾತ್ರದ ನೀಲಿಗಪ್ಪಿನ ಹಕ್ಕಿ. ಕಾಡಿನ ಕಾವಲುಗಾರರೆಂದೇ ಕರೆಯಲ್ಪಡುವ ನಿರ್ಭಯ ಹಕ್ಕಿಗಳಿವು. ಕಪ್ಪು, ಕಾಡುಬೂದು ಅಥವಾ ಸ್ಲೇಟು ಮೈಬಣ್ಣ ಮತ್ತು ಹೊಳೆಯುವ ಕೆಂಪು ಕಣ್ಣುಗಳನ್ನು ಹೊಂದಿರುತ್ತವೆ. ದಟ್ಟ ಮರಗಳು ಇರುವೆಡೆ ನಿತ್ಯ ಹರಿದ್ವರ್ಣದ ಕಾಡುಗಳಲ್ಲಿ ವಾಸಿಸುವ ಹಕ್ಕಿಗಳಿವು.

(8ನೇ ಪುಟ ನೋಡಿ)